ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)

SEVA BHARATHI
सेवा ही परमो धर्मः

ನವೆಂಬರ್ - 2025
ಸಂಚಿಕೆ - 11
ಸಂಪುಟ - 06

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216





## ಕನ್ಯಾಡಿ ಸೇವಾಭಾರತಿಯ ನೂತನ ಕಟ್ಟಡದಲ್ಲಿ ಕಾರ್ಯಾಲಯದ ವಾಸ್ತುಪೂಜೆ ಹಾಗೂ ಪ್ರವೇಶ

## ದೀಪಾವಳಿ ಸ್ನೇಹ ಮಿಲನ – 2025

## ಸಹಾಯ ಹಸ್ತ – ಸೇವಾಧಾಮದಿಂದ ಪುನಶ್ಚೇತನಗೊಂಡ ದಿವ್ಯಾಂಗರಿಂದ ತಯಾರಿಸಲಾದ ಉತ್ಪನ್ನಗಳ ಮಾರಾಟ ಯೋಜನೆ

## 3 ಯೋಜನೆಗಳಿಗೆ ಸಂಚಾಲಕರ ನೇಮಕ

## ಮಂಗಳೂರಿನ ಕ್ಯಾಂಪ್ಕೋ ಲಿಮಿಟೆಡ್ ನಿಂದ ನೂತನ ಕಟ್ಟಡಕ್ಕೆ ರೂ. 3,00,000/- ದೇಣಿಗೆ

## ಪುನಶ್ಚೇತನಗೊಂಡು ಮರಳಿ ವಿದ್ಯಾರ್ಥಿಗಳಿಗೆ ಜ್ಞಾನದೀವಿಗೆಯಾದ ಉಪನ್ಯಾಸಕ ಶ್ರೀ ಸದಾಶಿವ ಅರಸೀಕೆರೆ

ಯಶೋಗಾಥೆ

## ನಮ್ಮಿಂದಿಷ್ಟು

**ಆತ್ಮೀಯರೇ,**

ತಮಗೆಲ್ಲರಿಗೂ ನಮಸ್ಕಾರಗಳು,

ಸ್ನೇಹ ಮಿಲನ ಇದು ನಮ್ಮೆಲ್ಲರನ್ನು ಬೆಸೆದ ಕಾರ್ಯಕ್ರಮ. ದೀಪಾವಳಿ ಮುಗಿಯಿತು ಅನ್ನುವಷ್ಟರಲ್ಲಿ ನಮ್ಮ ನೂತನ ಕಟ್ಟಡದಲ್ಲಿ ನೆಲಮಹಡಿಯು ಲೋಕಾರ್ಪಣೆಗೊಳ್ಳುವ ಸನಿಹದಲ್ಲಿ ಕಾರ್ಯಕರ್ತ--ರನೆಲ್ಲ ಒಟ್ಟಾಗಿಸಬೇಕು, ಈ ಸೇವೆಯ ಕಂಪನ್ನು ಪಸರಿಸಬೇಕು ಎನ್ನುವ ಸಂಕಲ್ಪ ತೊಟ್ಟು ಸೇರಿಸಿರುವ ಸಭೆಯೇ ದೀಪಾವಳಿ ಸ್ನೇಹ ಮಿಲನ.

ಇಡೀ ಧರ್ಮಸ್ಥಳ ಗ್ರಾಮಕ್ಕೆ ಸಂಬಂಧಪಟ್ಟದ್ದು ಕನ್ಯಾಡಿಯ ಸುಪ್ರಜಾ ಸಭಾಂಗಣದಲ್ಲಿ ನಡೆದರೆ, ತಾಲೂಕಿಗೆ ಸಂಬಂಧ ಪಟ್ಟಂತೆ ಉಜಿರೆಯ ಶ್ರೀ ಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು. ಈ ಎರಡರ ಒಟ್ಟು ಸಂಖ್ಯೆ 150 ಆಗಬಹುದು. ಆದರೆ ಇವೆರಡೂ ನಮ್ಮನ್ನು ತಾಲೂಕಿನಾದ್ಯಂತ ಬೆಸೆಯಲು ಕಾರಣವಾಯ್ತು. ಮುಂದಿನ ಹಂತವಾಗಿ ಇವರನ್ನೆಲ್ಲ ಮುಂದಿನ ಪ್ರವೇಶೋತ್ಸವ ಕಾರ್ಯಕ್ರಮಕ್ಕೆ ಆಮಂತ್ರಿಸುವುದು ಹಾಗೂ ಅವರನ್ನೆಲ್ಲ ಈ ಸೇವಾ ಯಜ್ಞಕ್ಕೆ ತೊಡಗಿಸಿಕೊಳ್ಳುವುದೇ ಆಗಿದೆ.

ಯುವ ಸಮೂಹಕ್ಕೆ ಈ ಬಾರಿ ಆದ್ಯತೆಯನ್ನು ನೀಡಿದೆ. ಶ್ರೀ ದುರ್ಗಾ ಮಾತೃ ಮಂಡಳಿಗೆ ಶ್ರೀಮತಿ ಮಮತಾ ಬಿ ಯವರನ್ನು ಹಾಗೂ ಅವರನ್ನೇ ಸಬಲನಿ ಯೋಜನೆಯ ಸಂಚಾಲಕರನ್ನಾಗಿ, ಆರೋಗ್ಯ ಯೋಜನೆಗೆ ಶ್ರೀ ಅಖಿಲೇಶ್ ಶೆಟ್ಟಿ ನೇತ್ರಾವತಿಯವರನ್ನು ಸಂಚಾಲಕರನ್ನಾಗಿ ನೇಮಕ ಮಾಡಲಾಗಿದ್ದು ಸೇವಾಕಾರ್ಯಗಳಿಗೆ ಇನ್ನಷ್ಟು ವೇಗ ನೀಡಲು ಸೇವಾಭಾರತಿ ನಿರ್ಧರಿಸಿದೆ. ಇನ್ನುಳಿದಂತೆ ಸೇವಾಧಾಮ ಯೋಜನೆಗೆ ನಮ್ಮ ಹಿರಿಯರಾದ ಶ್ರೀ ಕೆ ಪುರಂದರ ರಾವ್ ಇವರನ್ನು ಮುಂದುವರಿಸಲಾಗಿದೆ. ಇನ್ನು ನೆಲಮಡಿಯ ಕಾರ್ಯಗಳು ಪೂರ್ಣಗೊಂಡು ಉದ್ಘಾಟನೆಗೆ ಸಜ್ಜುಗೊಂಡಿದೆ. ಮುಂದಿನ ತಿಂಗಳ ಮೊದಲ ಭಾಗದಲ್ಲಿ ಉದ್ಘಾಟನೆ ಯಾಗಬಹುದು. ಅದಕ್ಕೆ ಪೂರ್ವಭಾವಿಯಾಗಿ ವಾಸ್ತು ಪೂಜೆ ಪ್ರವೇಶ, ಶ್ರೀ ಗಣಪತಿ ಹವನ, ಆಶ್ಲೇಷ ಬಲಿ ಪೂಜೆ ಹಾಗೂ ಶ್ರೀ ದುರ್ಗಾ ಪೂಜೆಗಳು ಡಿಸೆಂಬರ್ 27 ಮತ್ತು 28 ರಂದು ಸಂಪನ್ನಗೊಂಡಿದೆ. ಇದರೊಂದಿಗೆ ಸ್ಥಳದಲ್ಲಿ ನಾಗದೇವರ ಮತ್ತು ದುರ್ಗಾದೇವಿಯ ಮೂರ್ತಿ ಪ್ರತಿಷ್ಠಾಪನೆ ಮಾಡುವ ಉದ್ದೇಶದಲ್ಲಿ ಶಿಲಾನ್ಯಾಸವನ್ನು ನೆರವೇರಿಸಲಾಗಿದೆ.

ಶ್ರೀ ದುರ್ಗಾ ಪೂಜೆಯ ಸಂದರ್ಭ ನಮ್ಮ ಹಿರಿಯರಾದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ ಪ್ರತಾಪ ಸಿಂಹ ನಾಯಕ್ ಆಗಮಿಸಿ ಭಜನಾ ಕಾರ್ಯದಲ್ಲಿ ಪಾಲ್ಗೊಂಡು ತಾವು ಭಜನೆ ಹೇಳಿ ಕೊಟ್ಟಿರುವುದು ಉಲ್ಲೇಖನೀಯ ಸಂಗತಿ. ಇದು ನಮ್ಮೆಲ್ಲರ ಪುಳಕಿತರನ್ನಾಗಿಸಿರುವುದೂ ಕೂಡ ಸತ್ಯ.

ನೂತನ ಕಟ್ಟಡ ಇನ್ನಷ್ಟು ಸೇವಾ ಕಾರ್ಯಗಳಿಗೆ ಮುನ್ನುಡಿಯಾಗಲಿದೆ. ಸೇವೆಯ ಕಂಪು ವಿಸ್ತಾರಗೊಳ್ಳಲು ಸರ್ವ. ಪ್ರಯತ್ನವಿದೆ



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಅಕ್ಟೋಬರ್ ತಿಂಗಳ ಸೇವಾಪಥ ಬಿಡುಗಡೆ




**ಅಕ್ಟೋಬರ್ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ E - ನ್ಯೂಸ್ ಲೆಟರ್ ಸೇವಾಪಥವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಗಳೂರು ವಿಭಾಗ ಪ್ರಚಾರಕರಾದ ಶ್ರೀಯುತ ಸುರೇಶ್ ಜಿ ರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 .: 94482 54888**

### ನಮ್ಮ ತಂಡ :

| | | |
|---|---|---|
| ಶ್ರೀಮತಿ ಸ್ವರ್ಣಗೌರಿ | - | ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | - | ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | - | ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಟ್ರಸ್ಟಿ |
| ಶ್ರೀ ಪೃಥ್ವಿಶ್ | - | ಟ್ರಸ್ಟಿ |

### ಸಲಹಾ ಮಂಡಳಿ :

**ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್**
**ಡಾ. ಎ. ಜಯಕುಮಾರ್ ಶೆಟ್ಟಿ**
**ಶ್ರೀಮತಿ ಮನೋರಮ ಭಟ್**
**ಶ್ರೀ ವಿಜಯ ಕೊಡವೂರು**
**ಶ್ರೀ ಆದಿತ್ಯ ಕಲ್ಲೂರಾಯ**
**ಶ್ರೀ ಕಿರಣ್ ರಾಜ್ ಕೆ.**

### ಸಂಚಾಲಕರು :


**ಶ್ರೀ ಕೆ. ಪುರಂದರ ರಾವ್**

## ಕನ್ಯಾಡಿ ಸೇವಾಭಾರತಿಯ ನೂತನ ಕಾರ್ಯಾಲಯದ ವಾಸ್ತುಪೂಜೆ ಹಾಗೂ ಪ್ರವೇಶ









**ಕನ್ಯಾಡಿ (ನ. 27 ಮತ್ತು 28):** ಸೇವಾಭಾರತಿ ಕಾರ್ಯಾಲಯದ ಸೇವಾನಿಕೇತನ ಹೊಸ ಕಟ್ಟಡದ ವಾಸ್ತುಪೂಜೆಯು ನವೆಂಬರ್ 27 ರಂದು ಭಕ್ತಿಭಾವದಿಂದ ನೆರವೇರಿತು. ಅದರ ಮುಂದುವರಿದ ಕಾರ್ಯಕ್ರಮವಾಗಿ ನವೆಂಬರ್ 28 ರಂದು ನವೀನ ಕಟ್ಟಡದಲ್ಲಿ ಕಾರ್ಯಾಲಯ ಪ್ರವೇಶ ಹಾಗೂ ಆಶ್ಲೇಷ ಬಲಿ ಪ್ರಧಾನವಾಗಿ ನಡೆಯಿತು. ಸಾಯಂಕಾಲ 6.00 ಗಂಟೆಗೆ ದುರ್ಗಾಪೂಜೆ ಜರುಗಿತು.

ಈ ವಿಶೇಷ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್, ಅನೇಕ ಗಣ್ಯರು, ಸಮಾಜಸೇವಕರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು. ಭಜನೆಯ ಮೂಲಕ ದೇವರ ಸ್ತುತಿ ಕಾರ್ಯಕ್ರಮಕ್ಕೆ ಭಕ್ತಿಪರ ವಾತಾವರಣದ ಸೊಬಗು ಹೆಚ್ಚಿಸಿತು. ಹೊಸ ಕಟ್ಟಡದ ಆರಂಭದೊಂದಿಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಪುನಶ್ಚೇತನವನ್ನು ಪಡೆದುಕೊಂಡು ಸ್ವಾವಲಂಬನೆಯತ್ತ ಸಾಗುವಂತೆ ಹಾಗೂ ಸೇವಾಭಾರತಿಯ ವಿವಿಧ ಸೇವಾಚಟುವಟಿಕೆಗಳು ಈ ಹೊಸ ಕಟ್ಟಡದ ಮೂಲಕ ಮತ್ತಷ್ಟು ಸಕ್ರಿಯವಾಗಿ ನಡೆಯಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಯಿತು..

## ಕನ್ಯಾಡಿ ಸೇವಾಭಾರತಿಯಿಂದ ದೀಪಾವಳಿ ಸ್ನೇಹ ಮಿಲನ – *2025*







**ಕನ್ಯಾಡಿ (ನ. 09):** ಸೇವಾಭಾರತಿ ಸಂಸ್ಥೆಯು ಕನ್ಯಾಡಿಯ ಸುಪ್ರಜ ಸಭಾಂಗಣ ಮತ್ತು ಉಜಿರೆಯ ಶ್ರೀ ಶಾರದಾ ಮಂಟಪದಲ್ಲಿ ನವೆಂಬರ್ 9 ರಂದು ಆಯೋಜಿಸಿದಂತಹ ದೀಪಾವಳಿ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಸಮಾಜದ ಎಲ್ಲಾ ಗಣ್ಯರನ್ನು ಒಗ್ಗೂಡಿಸಿ ಈವರೆಗೆ ನಡೆದು ಬಂದಂತಹ ದಾರಿಗಳು ಮತ್ತು ಸಂಸ್ಥೆಯ ಸೇವಾಕಾರ್ಯಗಳ ವಿಸ್ತಾರಗಳ ಬಗ್ಗೆ ವರದಿಯನ್ನು ನೀಡಲಾಯಿತು. ಹಾಗೂ ಮುಂದಿನ ದಿನಗಳಲ್ಲಿ ಇದರ ವಿಸ್ತಾರದ ಬಗ್ಗೆ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆಯಲಾಯಿತು.

ಡಾ. ಎಲ್ ಎಚ್ ಮಂಜುನಾಥ್, ಶ್ರೀ ಪುರಂದರ್ ರಾವ್, ಶ್ರೀಮತಿ ಮನೋರಮ ಭಟ್, ಶ್ರೀ ಭುಜಬಲಿ ಧರ್ಮಸ್ಥಳ ಸಹಿತ ಗಣ್ಯರು ಭಾಗವಹಿಸಿದ್ದರು. ಸಂಸ್ಥೆಯ ಬಗ್ಗೆ ಮತ್ತು ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ವಿವರವನ್ನು ಶ್ರೀ ಕೆ ವಿನಾಯಕ ರಾವ್ ರವರು ಪ್ರಸ್ತಾಪಿಸಿದರು. ಸಂಸ್ಥೆಯ ಸೇವಾಕಾರ್ಯಗಳ ಬಗ್ಗೆ ಶ್ರೀ ಚರಣ್ ಕುಮಾರ್ ಎಂ ರವರು ವಿವರವಿತ್ತರು ಪಂಚಪರಿವರ್ತನೆಯ ಬಗ್ಗೆ ಶ್ರೀ ಚಂದ್ರಶೇಖರ್ ರವರು ತಿಳಿಸಿದರು.

# ಸೇವಾಭಾರತಿಯ 3 ಯೋಜನೆಗಳಿಗೆ ಸಂಚಾಲಕರ ನೇಮಕ







**ಶ್ರೀ ಪುರಂದರ ರಾವ್, ಸೃಷ್ಟಿ** | **ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ** | **ಶ್ರೀಮತಿ ಮಮತಾ ಬಿ, ಪಿಜತ್ತನಡ್ಕ**

ಸೇವಾಭಾರತಿಯ ಪ್ರಮುಖ ಮೂರು ಯೋಜನೆಗಳಿಗೆ ಸಂಚಾಲಕರನ್ನು ಇತ್ತೀಚೆಗೆ ನೇಮಕ ಮಾಡಲಾಗಿದೆ. ಸೇವಾಧಾಮ ಯೋಜನೆಯ ಸಂಚಾಲಕರಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸೃಷ್ಟಿ ಶ್ರೀ ಪುರಂದರ ರಾವ್ ರವರನ್ನು ಮುಂದುವರೆಸಲಾಗಿದೆ. ಆರೋಗ್ಯಮ್ ಯೋಜನೆಗೆ ನೇತ್ರಾವತಿಯ ಶ್ರೀ ಅಖಿಲೇಶ್ ಶೆಟ್ಟಿಯವರನ್ನು ಸಂಚಾಲಕರನ್ನಾಗಿ ನೇಮಕ ಮಾಡಲಾಗಿದ್ದು, ಸಬಲಿನಿ ಯೋಜನೆಗೆ ಇತ್ತೀಚೆಗೆ ಶ್ರೀ ದುರ್ಗಾ ಮಾತೃ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾದ ಪಿಜತ್ತನಡ್ಕದ ಶ್ರೀಮತಿ ಮಮತಾ ಬಿ ಯವರನ್ನು ಸಂಚಾಲಕರನ್ನಾಗಿ ನೇಮಕ ಮಾಡಲಾಗಿದೆ.

ಸೇವಾಧಾಮ ಯೋಜನೆಯಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಸೌತಡ್ಕದಲ್ಲಿ ಸೇವಾಧಾಮ ಪುನಶ್ಚೇತನ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಸಬಲಿನಿ ಯೋಜನೆಯಡಿ ಉಚಿತ ಟೈಲರಿಂಗ್ ತರಬೇತಿಗಳನ್ನು ನೀಡುತ್ತಿದ್ದು, ಆರೋಗ್ಯಮ್ ಯೋಜನೆಯಡಿ ರಕ್ತದಾನ ಶಿಬಿರಗಳು ಹಾಗೂ ಆಂಬುಲೆನ್ಸ್ ಸೇವೆ ಅನುಷ್ಠಾನಗೊಳ್ಳುತ್ತಿದೆ.

## ಬೆಂಗಳೂರಿನ ಶೇಷಾ ಚಲಪತಿಯವರ 102ನೇ ಹುಟ್ಟುಹಬ್ಬದ ಪ್ರಯುಕ್ತ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 50,000/- ದೇಣಿಗೆ



**ಬೆಂಗಳೂರು (ನ.12):** ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಬೆಂಗಳೂರಿನ ಶ್ರೀ ಶೇಷಾ ಚಲಪತಿಯವರು 102ನೇ ಹುಟ್ಟುಹಬ್ಬದ ಪ್ರಯುಕ್ತ ಹಾಗೂ ಅವರ ಮಗಳಾದ ಶ್ರೀಮತಿ ಕೆ. ಎಸ್ ಗೀತಾರವರು ರೂ. 50,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಪಣಂಬೂರು ಬಾಲಕೃಷ್ಣ ರಾವ್ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 1,00,000/- ದೇಣಿಗೆ




**ಬೆಂಗಳೂರು (ನ.12):** ಪಣಂಬೂರು ಶ್ರೀ ಬಾಲಕೃಷ್ಣ ರಾವ್ ರವರನ್ನು ನವೆಂಬರ್ 12 ರಂದು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ತಂಡದಿಂದ ಭೇಟಿ ಮಾಡಿ ಸೇವಾಭಾರತಿಯ ಇತರೇ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಶ್ರೀಯುತರು ರೂ. 1,00,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಚಾರ್ವಾಕದ ಶ್ರೀ ಬಿ ಯತೀಂದ್ರರವರಿಂದ ನೂತನಕಟ್ಟಡಕ್ಕೆ ದೇಣಿಗೆ




**ಕನ್ಯಾಡಿ(ನ. 01):** ಬೆನ್ನುಹುರಿ ಅಪಘಾತಕ್ಕೊಳಗಾದ ಚಾರ್ವಾಕದ ಶ್ರೀ ಯತೀಂದ್ರ ರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮ ಸಂಸ್ಥೆಯ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಕನ್ಯಾಡಿ ಸೇವಾಭಾರತಿಗೆ ಭೇಟಿ.



**ಕನ್ಯಾಡಿ (ನ. 04)** ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಭಾಗ ಪ್ರಚಾರಕರು ಶ್ರೀಯುತ ಸುರೇಶ್ ಜಿ ಹಾಗೂ ವಿಭಾಗ ಗುಮಂತ್ ಕಾರ್ಯದ ಶ್ರೀಯುತ ಸುದರ್ಶನ್ ಮತ್ತು ತಾಲೂಕು ಸಹಕಾರ್ಯವಾಹರಾದ ಶ್ರೀಯುತ ತಿಲಕ್ ರವರು ಕನ್ಯಾಡಿ ಸೇವಾನಿಕೇತನಕ್ಕೆ ನವೆಂಬರ್ 04 ರಂದು ಭೇಟಿ ನೀಡಿದರು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡವನ್ನು ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮಂಗಳೂರಿನ ಕ್ಯಾಂಪ್ಕೋ ಲಿಮಿಟೆಡ್ ನಿಂದ ನೂತನ ಕಟ್ಟಡಕ್ಕೆ ರೂ.3,00,000/- ದೇಣಿಗೆ



**ಮಂಗಳೂರು(ನ. 01):** ಮಂಗಳೂರಿನ ದಿ ಕ್ಯಾಂಪ್ಕೋ ಲಿಮಿಟೆಡ್ ನ ಅಧ್ಯಕ್ಷರಾದ ಶ್ರೀ ಕಿಶೋರ್ ಕುಮಾರ್ ಕೊಡ್ಗಿಯವರನ್ನು ನವೆಂಬರ್ 6 ರಂದು ಸೇವಾಭಾರತಿಯಿಂದ ಭೇಟಿ ಮಾಡಲಾಯಿತು. ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ಸಂಸ್ಥೆಯಿಂದ ರೂ. 3,00,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಟ್ರಸ್ಟಿ ಶ್ರೀ ಜಯರಾಜ್ ಸಾಲ್ಯಾನ್ ಕಾನರ್ಪ ಹಾಗೂ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ಮತ್ತು ಗಾಲಿಕುರ್ಚಿಗೆ ದೇಣಿಗೆ :




**ಸೌತಡ್ಕ (ನ. 09):** ಬೆಂಗಳೂರಿನ ಶ್ರೀಮತಿ ಸೀತಾಮಹಾಲಕ್ಷ್ಮಿ, ಶ್ರೀಮತಿ ಪವಿತ್ರಾ ಮತ್ತು ಶ್ರೀಮತಿ ಹೇಮಲತಾರವರು ನವೆಂಬರ್ 09 ರಂದು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಗಾಲಿಕುರ್ಚಿಗೆ ಮತ್ತು ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 21,000 ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಹಾಯ ಹಸ್ತ – ಸೇವಾಧಾಮದಿಂದ ಪುನಶ್ಚೇತನಗೊಂಡ ದಿವ್ಯಾಂಗರಿಂದ ತಯಾರಿಸಲಾದ ಉತ್ಪನ್ನಗಳ ಮಾರಾಟ ಯೋಜನೆ




**ಶಿರಸಿ(ನ. 11):** ಶಿರಸಿಯಲ್ಲಿ ನವೆಂಬರ್ 8 ಮತ್ತು 9ರಂದು ಇನ್ನರ್ ವೀಲ್ ಕ್ಲಬ್ ಆಯೋಜಿಸಿದ ಸಂಪ್ರೀತಿ ಕಾರ್ಯಕ್ರಮದಲ್ಲಿ, ಸೇವಾಧಾಮದಿಂದ ಪುನಶ್ಚೇತನಗೊಂಡ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ತಯಾರಿಸಿದ ವಿವಿಧ ಕರಕುಶಲ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಯನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ದಿವ್ಯಾಂಗರು ಸ್ವಯಂ ತಯಾರಿಸಿದ ಬತ್ತಿಕಟ್ಟು, ಹೂಗಳು, ಉಣ್ಣೆಯ ವಸ್ತುಗಳು, ಗೊಂಬೆಗಳು ಸೇರಿದಂತೆ ಹಲವು ವಿಧದ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಿದರು. ಈ ಮಳಿಗೆಯನ್ನು ಸೌಜನ್ಯ ತೆಲಂಗ ರವರ ನೇತೃತ್ವದಲ್ಲಿ, ಶ್ರೀ ಕೃಷ್ಣರವರ ಸಹಕಾರದೊಂದಿಗೆ ಪ್ರಥಮ ಬಾರಿಗೆ ಆಯೋಜಿಸಲಾಯಿತು. ಜನಸಾಮಾನ್ಯರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಮಳಿಗೆಯ ಸಂಪೂರ್ಣ ನಿರ್ವಹಣೆಯನ್ನು ದಿವ್ಯಾಂಗರೇ ಮಾಡಿರುವುದು ವಿಶೇಷ. ಕಾರ್ಯಕ್ರಮದ ಕೊನೆಯಲ್ಲಿ ಸುಮಾರು ₹19,000/- ಮೌಲ್ಯದ ವ್ಯಾಪಾರ ನಡೆದಿದ್ದು, ಇದು ಕಾರ್ಯಕ್ರಮದ ಯಶಸ್ಸಿನ ಮತ್ತು ದಿವ್ಯಾಂಗರ ಆತ್ಮವಿಶ್ವಾಸದ ಸ್ಪಷ್ಟ ಉದಾಹರಣೆಯಾಗಿದೆ.




# ಕನ್ಯಾಡಿ ಸೇವಾಭಾರತಿಯಿಂದ ಹೊಸದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಭೇಟಿ

**ಮಂಗಳೂರು (ನ. 10):** ಹೊಸದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಪಿ ಎಸ್ ಪ್ರಕಾಶ್ ರವರನ್ನು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ತಂಡವು ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಬಗ್ಗೆ ಮತ್ತು ಸೇವಾಭಾರತಿಯ ಇತರೇ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿತು.. ಈ ಸಂದರ್ಭ ಶ್ರೀಯುತರು ಕಟ್ಟಡ ನಿರ್ಮಾಣ ಶೀಘ್ರ ನೆರವೇರುವಂತೆ ಶುಭ ಹಾರೈಸಿದರು.



# ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ

**ಸೌತಡ್ಕ (ನ. 12):** ಬೆಳ್ತಂಗಡಿಯ ಶ್ರೀ ಚಂದ್ರಶೇಖರ ಹಾಗೂ ಶ್ರೀಮತಿ ಭವ್ಯರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ನವೆಂಬರ್ 12 ರಂದು ಭೇಟಿ ನೀಡಿ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ ರೂ. 2000/- ದೇಣಿಗೆ ಮತ್ತು ದಿನಸಿ ಸಾಮಾಗ್ರಿಗಳನ್ನು ನೀಡಿ ಸಹಕರಿಸಿದ್ದಾರೆ. ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಶುಭಹಾರೈಸಿ ಧನ್ಯವಾದವಿತ್ತರು.

## ಶಿರ್ವ ಸಹಕಾರಿ ವ್ಯವಸಾಯಿಕ ಸಂಘಕ್ಕೆ ಕನ್ಯಾಡಿ ಸೇವಾಭಾರತಿಯಿಂದ ಭೇಟಿ.



**ಶಿರ್ವ (ನ. 06)** ಶಿರ್ವ ಸಹಕಾರಿ ವ್ಯವಸಾಯಿಕ ಸಂಘದ ಅಧ್ಯಕ್ಷರಾದ ಶ್ರೀ ಪ್ರಸಾದ್ ಮತ್ತು ನಿರ್ದೇಶಕರನ್ನು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರ ತಂಡವು ಭೇಟಿ ಮಾಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ಸಹಕರಿಸುವಂತೆ ಮನವಿ ಪತ್ರವನ್ನು ನೀಡಿ ವಿನಂತಿಸಲಾಯಿತು.

## ಹುಟ್ಟುಹಬ್ಬದ ಪ್ರಯುಕ್ತ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ದಿನಸಿ ಸಾಮಾಗ್ರಿಗಳ ಹಸ್ತಾಂತರ



**ಕನ್ಯಾಡಿ (ನ. 04)** ಸಂಸ್ಥೆಯ ಹಿತೈಷಿ ಮೂಡಿಗೆರೆಯ ಶ್ರೀ ರಾಧಾಕೃಷ್ಣ ರವರು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ತಮ್ಮ ಮೊಮ್ಮಗ ಮಾಸ್ಟರ್ ವೇದಾಂತ್ ಕಲಮೆ ಅವರ ಹುಟ್ಟುಹಬ್ಬದ ಪ್ರಯುಕ್ತ ದಿನಸಿ, ತರಕಾರಿಗಳನ್ನು ದೇಣಿಗೆಯಾಗಿ ನೀಡಿರಿರುತ್ತಾರೆ.

## ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿಯ ನೂತನ ಸಮಿತಿ ರಚನೆ ಮತ್ತು ಜವಾಬ್ದಾರಿ ಹಸ್ತಾಂತರ



**ಕನ್ಯಾಡಿ (ನ. 09)** ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿಯ ನೂತನ ಸಮಿತಿ ರಚನೆ ಮತ್ತು ಜವಾಬ್ದಾರಿ ಹಸ್ತಾಂತರ ಕಾರ್ಯಕ್ರಮವು ಕನ್ಯಾಡಿಯ ಸುಪ್ರಜಾ ಸಭಾಂಗಣದಲ್ಲಿ ನಡೆಯಿತು.

ಶ್ರೀ ದುರ್ಗಾ ಮಾತೃ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಶಾಂತಾ ಪಿ. ಶೆಟ್ಟಿ, ಖಜಾಂಚಿ ಶ್ರೀಮತಿ ಬಬಿತಾರವರು ತಮ್ಮ ಜವಾಬ್ದಾರಿಯನ್ನು ನೂತನ ಸಮಿತಿಯ ಅಧ್ಯಕ್ಷೆ ಶ್ರೀಮತಿ ಮಮತಾ, ಉಪಾಧ್ಯಕ್ಷೆ ಶ್ರೀಮತಿ ವೇದಾವತಿ ಆರ್, ಕಾರ್ಯದರ್ಶಿ ಶ್ರೀಮತಿ ಚಂದ್ರಾವತಿ, ಸಹ ಕಾರ್ಯದರ್ಶಿ ಶ್ರೀಮತಿ ವೇದಾವತಿ, ಖಜಾಂಚಿ ಶ್ರೀಮತಿ ಪ್ರೇಮ ಹಾಗೂ ಸದಸ್ಯೆ ಶ್ರೀಮತಿ ಯಮುನಾರವರಿಗೆ ಅಧಿಕೃತವಾಗಿ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಕನ್ಯಾಡಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಹಾಗೂ ಶ್ರೀ ದುರ್ಗಾ ಮಾತೃ ಮಂಡಳಿಯ ಸದಸ್ಯರಾದ ಶ್ರೀಮತಿ ಸವಿತಾ ಎಂ ರಾವ್, ಶ್ರೀಮತಿ ವಸಂತಿ ಗೌಡ, ಶ್ರೀಮತಿ ವಿಜಯಲಕ್ಷ್ಮೀ ಉಪಸ್ಥಿತರಿದ್ದರು.

## ಬಜಿಲದ ಶ್ರೀ ರಾಧೇಶ್ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 10,000/- ದೇಣಿಗೆ :



**ಕನ್ಯಾಡಿ (ನ.12):** ಬೆಳ್ತಂಗಡಿ ತಾಲೂಕಿನ ಬಜಿಲದ ಶ್ರೀ ರಾಧೇಶ್ ಗೌಡರವರು ಕನ್ಯಾಡಿ ಸೇವಾನಿಕೇತನಕ್ಕೆ ನವೆಂಬರ್ 12 ರಂದು ಭೇಟಿ ನೀಡಿ ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಶುಭಹಾರೈಸಿ ಧನ್ಯವಾದವಿತ್ತರು.

## ಕನ್ಯಾಡಿಯ ಶ್ರೀ ದುರ್ಗಾಮಾತೃ ಮಂಡಳಿಯಿಂದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ



**ಕನ್ಯಾಡಿ (ನ.09):** ಶ್ರಿ ದುರ್ಗಾ ಮಾತೃ ಮಂಡಳಿಯ ಸದಸ್ಯರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## 5 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ



## ಸೇವಾಧಾಮಕ್ಕೆ LIC ತಂಡದ ಭೇಟಿ



**ಸೌತಡ್ಕ(ನ.13):** ಸೇವಾಧಾಮದಲ್ಲಿ ಅಳವಡಿಸಿರುವ ಸೌರ ವಿದ್ಯುತ್ ವ್ಯವಸ್ಥೆಯ ಪರಿಶೀಲನೆಗಾಗಿ ಭಾರತೀಯ ಜೀವ ವಿಮಾ ನಿಗಮದ (LIC) ತಂಡವು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ನವೆಂಬರ್ 13 ರಂದು ಎಲ್ಐಸಿ ಬಂಟ್ವಾಳ ಶಾಖಾ ಹಿರಿಯ ವ್ಯವಸ್ಥಾಪಕ ಶ್ರೀ ಗುರುದತ್ ನಾಯಕ್, ಎಲ್ಐಸಿ ಬೆಳ್ತಂಗಡಿ (ಎಸ್.ಒ) ಶಾಖಾ ವ್ಯವಸ್ಥಾಪಕ ಶ್ರೀ ಪ್ರಕಾಶ್ ಕುಮಾರ್, ಎಲ್ಐಸಿ ವಲಯ ಕಚೇರಿ, ಹೈದರಾಬಾದ್‌ನ ಪರಿಶೀಲನಾ ವಿಭಾಗದ ಸಹಾಯಕ ಅಧಿಕಾರಿಗಳು ಶ್ರೀ ಮೋಹನ್ ಕಂತ್ ರಂಗದಾಳ ಹಾಗೂ ಶ್ರೀ ನಟರಾಜ್, ಜೊತೆಗೆ ಎಲ್ಐಸಿ ಬೆಳ್ತಂಗಡಿ ವಿಭಾಗದ ಅಭಿವೃದ್ಧಿ ಅಧಿಕಾರಿ ಶ್ರೀ ಉದಯಶಂಕರ್ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಸ್ತುತ ಹಾಗೂ ಮುಂಬರುವ ಯೋಜನೆಗಳ ಬಗ್ಗೆ ಅವರಿಗೆ ವಿವರಿಸಲಾಯಿತು. ಬೈಂದೂರಿನಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡ "ಸೇವಾಧಾಮದ ಹಾಗೂ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರ ಸೇವಾಧಾಮದ ಬಗ್ಗೆ ಮಾಹಿತಿ ನೀಡಲಾಯಿತು.

ಅದೇ ಸಂದರ್ಭದಲ್ಲಿ, ಎಲ್ಐಸಿ ಗೋಲ್ಡನ್ ಜ್ಯುಬಿಲಿ ಫೌಂಡೇಶನ್‌ಗೆ ಸಲ್ಲಿಸಿರುವ ಸಿಎಸ್ಆರ್ ಪ್ರಸ್ತಾವನೆ ಕುರಿತು ನಿರಂತರ ಅನುಸರಣೆ ನಡೆಸಿ, ಸಂಸ್ಥೆಯ ನಡೆಯುತ್ತಿರುವ ಯೋಜನೆಗಳಿಗೆ ಅಗತ್ಯವಾದ ಸಹಕಾರ ನೀಡುವಂತೆ ವಿನಂತಿಸಲಾಯಿತು.

**ಬೆಂಗಳೂರು (ನ. 12)** ಬೆಂಗಳೂರು APD ಸಂಸ್ಥೆಯ ಸಹಕಾರದಲ್ಲಿ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಸೆಪ್ಟೆಂಬರ್ ತಿಂಗಳಿನಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆಯಾದ ಸಂದರ್ಭದಲ್ಲಿ 30 ಗಾಲಿಕುರ್ಚಿಯನ್ನು ನೀಡುವುದಾಗಿ ನಿರ್ಧರಿಸಿದ್ದು ಅದರಲ್ಲಿ 5 ಗಾಲಿಕುರ್ಚಿಯನ್ನು ಬೆಂಗಳೂರಿನ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ನ ಮುಖ್ಯ ವ್ಯವಸ್ಥಾಪಕರಾದ ಶ್ರೀ ವೆಂಕಟಗಿರಿ ಪಿ ಎಂ ಹಾಗೂ ಕುಟುಂಬಸ್ಥರ ಬೆಂಬಲದಲ್ಲಿ ಬೆಂಗಳೂರು APD ಸಹಕಾರದಲ್ಲಿ ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮದಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ತೀರ್ಥಹಳ್ಳಿಯ ಶ್ರೀ ಅಶೋಕ್ ಬಿ, ಶ್ರೀ ಶ್ರೀಧರ, ಮಡಿಕೇರಿಯ ಶ್ರೀ ಹರೀಶ್, ಶ್ರೀ ಶಿವನ್, ನರಸೀಪುರದ ಶ್ರೀ ರಮೇಶ್ ಟಿ ರವರಿಗೆ ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು. ಫಲಾನುಭವಿಗಳಿಗೆ ಶುಭಹಾರೈಸಿ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದರು.

## ಬೆಂಗಳೂರಿನ ಪ್ರಕರ್ಶ ಅಕಾಡೆಮಿಯಿಂದ ಸೇವಾಭಾರತಿಯ ಭೇಟಿ



**(ಕನ್ಯಾಡಿ ನ.25):** ಪ್ರಕರ್ಶ ಅಕಾಡೆಮಿ ಸಂಸ್ಥೆಯ ಕಾರ್ಯಕ್ರಮ ಸಂಯೋಜಕಿಯಾದ ಶ್ರೀಮತಿ ವಿದ್ಯಾರವರು ನವೆಂಬರ್ 25 ರಂದು ಮಹಿಳಾ ಸಂವರ್ಧಿನಿ ಕಾರ್ಯಗಾರ ನಿಮಿತ್ತವಾಗಿ ಸೇವಾಭಾರತಿ ಸಂಸ್ಥೆಗೆ ಭೇಟಿ ನೀಡಿ ಈವರೆಗೆ ನಡೆದ ಸಂವರ್ಧಿನಿ ಕಾರ್ಯಾಗಾರದ ಚಟುವಟಿಕೆಗಳ ಬಗ್ಗೆ ವಿಮರ್ಶೆ ಮಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


## ಬೆಳ್ತಂಗಡಿ ತಾಲೂಕು ಕಣಿಯೂರಿನ ಶ್ರೀ ಬಾಲಕೃಷ್ಣ ಮಡಿವಾಳ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 10,000/- ದೇಣಿಗೆ



**ಕನ್ಯಾಡಿ (ನ.25):** ಬೆನ್ನುಹುರಿ ಅಪಘಾತಕ್ಕೊಳಗಾದ ಬೆಳ್ತಂಗಡಿ ತಾಲೂಕು ಕಣಿಯೂರಿನ ಶ್ರೀ ಬಾಲಕೃಷ್ಣ ಮಡಿವಾಳರವರು ನವೆಂಬರ್ 25 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಶ್ರೀಯುತರು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಧರ್ಮಸ್ಥಳ ಗ್ರಾಮದ ಪೊದುಂಬಿಲ ರಾಮಪ್ರಸಾದ್ ಪಾಂಗಣ್ಣಾಯ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 20,000/- ದೇಣಿಗೆ



**ಕನ್ಯಾಡಿ (ನ.19):** ಧರ್ಮಸ್ಥಳ ಗ್ರಾಮದ ಪೊದುಂಬಿಲ ಶ್ರೀ ರಾಮಪ್ರಸಾದ್ ಪಾಂಗಣ್ಣಾಯರವರು ನವೆಂಬರ್ 20 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತ-ಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಶ್ರೀಯುತರು ರೂ. 20,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ. ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಪಣಂಬೂರು ನಾಗೇಶ್ ರಾವ್ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 1,00,000/- ದೇಣಿಗೆ



**ಬೆಂಗಳೂರು (ನ.12):** ಪಣಂಬೂರು ಶ್ರೀ ನಾಗೇಶ್ ರಾವ್ ರವರನ್ನು ನವೆಂಬರ್ 12 ರಂದು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ತಂಡದಿಂದ ಭೇಟಿ ಮಾಡಿ ಸೇವಾಭಾರತಿಯ ಇತರೇ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಶ್ರೀಯುತರು ರೂ. 1,00,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಬೆಳ್ತಂಗಡಿ ತಾಲೂಕು ಕಣಿಯೂರಿನ ಶ್ರೀ ತಿರುಮಲೇಶ್ವರ ಭಟ್ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 1,000/- ದೇಣಿಗೆ



**ಕನ್ಯಾಡಿ (ನ.25):** ಬೆನ್ನುಹುರಿ ಅಪಘಾತಕ್ಕೊಳಗಾದ ಬೆಳ್ತಂಗಡಿ ತಾಲೂಕು ಕಣಿಯೂರಿನ ಶ್ರೀ ತಿರುಮಲೇಶ್ವರ ಭಟ್ ರವರು ನವೆಂಬರ್ 25 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಶ್ರೀಯುತರು ರೂ. 1,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಪುತ್ತೂರಿನ ಎಸ್.ಡಿ.ಪಿ. ರೆಮಿಡೀಸ್ ಆ್ಯಂಡ್ ರಿಸರ್ಚ್ ಸೆಂಟರ್ ನಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 50,000/- ದೇಣಿಗೆ




**ಪುತ್ತೂರು (ನ.10):** ಎಸ್.ಡಿ.ಪಿ. ರೆಮಿಡೀಸ್ ಆ್ಯಂಡ್ ರಿಸರ್ಚ್ ಸೆಂಟರ್ ನ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಹರಿಕೃಷ್ಣ ಪಾಣಜೆ ಮತ್ತು ಮ್ಯಾನೇಜಿಂಗ್ ಪಾರ್ಟ್ನರ್ ಶ್ರೀಮತಿ ರೂಪಲೇಖರವರನ್ನು ನವೆಂಬರ್ 11 ರಂದು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ತಂಡದಿಂದ ಭೇಟಿ ಮಾಡಲಾಯಿತು.

ಈ ಸಂದರ್ಭದಲ್ಲಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಟ್ರಸ್ಟ್‌ನ ವತಿಯಿಂದ ರೂ. 50,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಕನ್ಯಾಡಿ ಸೇವಾಭಾರತಿಯಿಂದ ಬೆಂಗಳೂರು ACE ಡಿಸೈನರ್ ಲಿಮಿಟೆಡ್ ನ ಭೇಟಿ.



**ಬೆಂಗಳೂರು (ನ.12):**AMS ನ ಸಂಸ್ಥಾಪಕರಾದ ಮತ್ತು ACE ಡಿಸೈನರ್ ಲಿಮಿಟೆಡ್ ನ ಮ್ಯಾನೇಜಿಂಗ್ ಡೈರೆಕ್ಟರ್ ರಾದ ಶ್ರೀ ಪಿ ರಾಮದಾಸ್ ಮತ್ತು CSR ಟೀಮ್ ನ ಶ್ರೀ ಕೃಷ್ಣ ಮೂರ್ತಿ ಹಾಗೂ ಶ್ರೀ ಪಣಂಬೂರು ಬಾಲಕೃಷ್ಣ ರಾವ್ ರವರನ್ನು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ತಂಡವು ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಬಗ್ಗೆ ಮತ್ತು ಸೇವಾಭಾರತಿಯ ಇತರೇ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿತು. ಈ ಸಂದರ್ಭ ಶ್ರೀಯುತರು ಕಟ್ಟಡ ನಿರ್ಮಾಣ ಶೀಘ್ರ ನೆರವೇರುವಂತೆ ಶುಭ ಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ MESCOM ಅಧ್ಯಕ್ಷರ ಭೇಟಿ.




**ಮಂಗಳೂರು (ನ. 18):** MESCOM ಅಧ್ಯಕ್ಷರಾದ ಶ್ರೀ ಕೆ ಹರೀಶ್ ಕುಮಾರ್ ರವರನ್ನು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ತಂಡವು ನವೆಂಬರ್ 18 ರಂದು ಭೇಟಿ ನೀಡಿ ಸೇವಾಭಾರತಿಯ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ CSR ಅನುದಾನವನ್ನು ಒದಗಿಸಿಕೊಡುವಂತೆ ಮನವಿ ಮಾಡಲಾಯಿತು. ಶ್ರೀಯುತರು ಕಟ್ಟಡ ನಿರ್ಮಾಣ ಶೀಘ್ರ ನೆರವೇರುವಂತೆ ಶುಭ ಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ ಬೆಂಗಳೂರು ವಾಂಟಿವಾ ಇಂಡಿಯಾ ಪ್ರೈವೇಟ್ ಲಿಮಿಟೆಡ್ CSR ಟೀಮ್ ನ ಶ್ರೀ ಶ್ರೀನಿಧಿ ಭೇಟಿ.



**ಬೆಂಗಳೂರು (ನ.12)** ವಾಂಟಿವಾ ಇಂಡಿಯಾ ಪ್ರೈವೇಟ್ ಲಿಮಿಟೆಡ್ CSR ಟೀಮ್ ನ ಶ್ರೀ ಶ್ರೀನಿಧಿ ರವರನ್ನು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ತಂಡವು ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಬಗ್ಗೆ ಮತ್ತು ಸೇವಾಭಾರತಿಯ ಇತರೇ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿತು. ಮತ್ತು ಸೇವಾಧಾಮದ ಸಾಧನ ಸಲಕರಣೆಗಳಿಗೆ CSR ಅನುದಾನವನ್ನು ಒದಗಿಸುವಂತೆ ಮನವಿ ಮಾಡಲಾಯಿತು..

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/-ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್ ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ. ಅಲ್ಲದೆ ಮಂಗಳೂರಿನ NMPA ಯ CSR ಅನುದಾನ (ರೂ. 25 ಲಕ್ಷ)ವು ಮಂಜೂರುಗೊಂಡಿರುವ ಪತ್ರ ಲಭ್ಯವಿದ್ದು ಮೊದಲ ಮಹಡಿಯ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. Mani and Minoo ಟ್ರಸ್ಟ್ ನಿಂದ ಸಹಕಾರ ದೊರಕಿದೆ. ಹಾಗೆ LIC of INDIA ಮತ್ತು ಬೆಂಗಳೂರಿನ BEL ಕಂಪನಿಗೆ CSR ನಿಧಿಗಾಗಿ ಮನವಿಯನ್ನು ಸಲ್ಲಿಸಲಾಗಿದೆ. ಪ್ರಸ್ತುತ ನೆಲಮಹಡಿ ಮತ್ತು ಒಂದನೇ ಮಹಡಿಗೆ ಸಹಕಾರದ ಭರವಸೆಯಿದ್ದು ಉಳಿದ ಎರಡು ಮಹಡಿಗಳಿಗೆ ಬೇರೆ ಬೇರೆ CSR ,ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ

**ಒಟ್ಟು ಮೊತ್ತ ರೂ. 3.05,72,580/- ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.**

ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ ( 12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ, ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

**BANK ACCOUNT DETAILS**

SEVABHARATHI REGD

**Scan and Pay also**

A/c Holder - M/s. Sevabharathi(R)

A/c No - 120000400920

Account Type - Current Account, Canara Bank Dharmasthala Branch

IFS Code - CNRB0010246

## ಸೇವಾನಿಧಿ ದಾನಿಗಳು

- ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಶ್ರೀಮತಿ ಜಯಂತಿ ಪುರಂದರ, ಬೆಂಗಳೂರು
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀ ಶಿವಕುಮಾರ್, ಉಜಿರ್
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ಸಂತೋಷ್, ಕೊಕ್ಕಡ
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
- ಶ್ರೀ ಜಯಾನಂದ ಮಲಿಯಾಳ, ಕನ್ಯಾಡಿ
- ಶ್ರೀ ಹರ್ಷಿತ್, ಕನ್ಯಾಡಿ
- ಮಾಸ್ಟರ್ ಅದ್ವೈತ ಪೈ, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಶ್ರೀ ಮಧುಸೂಧನ್, ಉಜಿರೆ

## ಮಹನೀಯ ದಾನಿಗಳು


- ಶ್ರೀ ತುಕಾರಾಂ ಸಾಲಿಯಾನ್ ಎ, ಕನ್ಯಾಡಿ
- ಶ್ರೀ ಪಣಂಬೂರು ನಾಗೇಶ್ ರಾವ್, ಮುಂಬೈ
- ಶ್ರೀ ಪಣಂಬೂರು ಬಾಲಕೃಷ್ಣ ರಾವ್, ಬೆಂಗಳೂರು
- ಕು. ಭವ್ಯಶ್ರೀ, ಕಡಿರುದ್ಯಾವರ
- ಶ್ರೀ ಪುಷ್ಪರಾಜ್, ಅಡ್ಯಾರ್
- ಶ್ರೀ ಕಿಶನ್ ಕುಮಾರ್, ಬಂಟ್ವಾಳ
- ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ
- ಶ್ರೀ ಕೌಶಿಕ್ ಎಸ್ ರಾವ್, ಕನ್ಯಾಡಿ
- ಶ್ರೀ ಹೆಚ್ ಡಿ ಶೆಣೈ, ಕೊಲ್ಲಾಪುರ
- ಶ್ರೀ ಪಿ ತುಕಾರಾಂ ನಾಯ್ಕ್, ಪಾಣೆಮಂಗಳೂರು
- ಶ್ರೀ ಮೋಹನ್ ಎಸ್, ನಿಡ್ಲೆ
- ಕು ಚೈತ್ರ ಕುಮಾರಿ, ರಾಜಾಜಿನಗರ
- ಶ್ರೀ ರಾಧೇಶ್ ಗೌಡ, ಬಜಿಲ
- ಶ್ರೀಮತಿ ಕವಿತಾ ಎಂ ಪಿ, ಬೆಂಗಳೂರು
- ಶ್ರೀ ಸುಕ್ಷಿತ್ ಕುಮಾರ್ ಬಿ ಎಂ, ಕಡಿರುದ್ಯಾವರ
- ಶ್ರೀಮತಿ ಕೆ ಎಸ್ ಗೀತಾ, ಬೆಂಗಳೂರು
- ಶ್ರೀ ಕೆ ಎನ್ ಶೇಷಾಚಲಪತಿ, ಬೆಂಗಳೂರು
- ಶ್ರೀ ರಾಮಪ್ರಸಾದ್ ಪಿ ಕೆ, ನಾರ್ಯ
- ಶ್ರೀಮತಿ ವಿಜಯ ಪಿ, ಪುತ್ತೂರು
- ಶ್ರೀ ರಮೇಶ, ಬೆಳ್ತಂಗಡಿ
- ಶ್ರೀ ಜಯಂತ್ ಪೂಜಾರಿ, ಬಂಟ್ವಾಳ
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಬಾಲಕೃಷ್ಣ, ಕಣಿಯೂರು
- ಶ್ರೀ ಪಿ ತಿರುಮಲೇಶ್ವರ ಭಟ್, ಕಣಿಯೂರು
- ಡಾ ಎ ಜಯಕುಮಾರ್ ಶೆಟ್ಟಿ, ಉಜಿರೆ
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀ ಬಾಬು ಗೌಡ, ಕನ್ಯಾಡಿ
- ಶ್ರೀ ಬಾಲಚಂದ್ರ, ಎನ್ ಆರ್ ಪುರ
- ಶ್ರೀಮತಿ ಕೆ ಹೇಮಲತಾ, ಬೆಂಗಳೂರು
- ಶ್ರೀಮತಿ ಪವಿತ್ರ ಸೋಮಣ್ಣ, ಬೆಂಗಳೂರು
- ಶ್ರೀ ಅರ್ಜುನ್ ಎಸ್, ಬೆಂಗಳೂರು
- ಶ್ರೀ ಚಂದ್ರಶೇಖರ್, ಕಡಿರುದ್ಯಾವರ

## ವಸ್ತು ರೂಪದಲ್ಲಿ ದೇಣಿಗೆ

- ಶ್ರೀ ರಾಧಾಕೃಷ್ಣ, ಮೂಡಿಗೆರೆ
- ಶ್ರೀ ಚಂದ್ರಶೇಖರ್, ಕಡಿರುದ್ಯಾವರ
- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಜಮಾ ಉಗ್ರಾಣ, ಧರ್ಮಸ್ಥಳ

## ಸಂಘ ಸಂಸ್ಥೆಗಳು

- ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್, ಮಂಗಳೂರು
- ಪ್ಲವ ಫೌಂಡೇಶನ್, ಮಣಿಪಾಲ
- ಜಿಆರ್ ಕನ್ಸಲ್ಟಿಂಗ್, ಬೆಂಗಳೂರು
- ಎಸ್ ಡಿ ಪಿ ಚಾರಿಟೇಬಲ್ ಟ್ರಸ್ಟ್, ಪುತ್ತೂರು



## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ

ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ನವೆಂಬರ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ| ವೈಶಾಕ್ ಬಿ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 7 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.


## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ನವೆಂಬರ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು




**ಶ್ರೀಮತಿ ಜೈನಾಬಿ, ಪುತ್ತೂರು**




**ಶ್ರೀ ಶಿವುಕುಮಾರ್ ವಿ ಎಂ, ಕೊಡಗು**




**ಶ್ರೀಮತಿ ಸರಸ್ವತಿ ಕಾಸರಗೋಡು**

## ನವೆಂಬರ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1.ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | - | 20 |
| 2.ಗಾಲಿಕುರ್ಚಿ ವಿತರಣೆ | - | 1 |
| 2. ಹೊಸ ಗುರುತಿಸುವಿಕೆ | - | 13 |
| 4. ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುವವರು | - | 10 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಜೈರಾಜ್ ಸಾಲ್ಯಾನ್**
ಕಾನರ್ಪ



**ಶ್ರೀ ಪೃಥ್ವಿಶ,**
ಧರ್ಮಸ್ಥಳ



**ಶ್ರೀ ವಿರುಪಾಕ್ಷಿ ಹಾದಿಮನಿ**
ಬೆಳಗಾವಿ



**ಶ್ರೀ ಸುದರ್ಶನ್ ಕೆ.ವಿ,**
ಕನ್ಯಾಡಿ -2



**ಶ್ರೀ ಆದಿತ್ಯ ಕಲ್ಲೂರಾಯ,**
ಪುತ್ತೂರು




**ಶ್ರೀ ರಾಧೇಶ್ ಗೌಡ,**
ಬಜಿಲ



**ಶ್ರೀ ಬಿ ಪುರಂದರ,**
ನಾರ್ಯ



**ಶ್ರೀ ವಿನೋದ್ ರಾಜ್**
ಕಳ್ಮಂಜ



**ಬೇಬಿ। ವಿನ್ಮಯಿ ಯಾಧ್ವಿ,**
ಪುತ್ತೂರು




**ಶ್ರೀ ಪ್ರಭಾಕರ್ ಹೆಗ್ಡೆ,**
ಉಜಿರೆ



**ಶ್ರೀ ನಾಗಾರ್ಜುನ್ ಡಿ ಎ,**
ತುಮಕೂರು



**ಶ್ರೀ ಗಣೇಶ್ ಪಿ ಐತಾಳ್,** ಕೊಕ್ಕಡ




**ಶ್ರೀ ಜಯಂತ್ ಪೂಜಾರಿ,** ನಡಾರು



**ಶ್ರೀ ಅಣ್ಣು ದೇವಾಡಿಗ,**
ಧರ್ಮಸ್ಥಳ




**ಡಾ। ಎ ಸಾಜನ್ ಶೆಟ್ಟಿ,**
ಉಜಿರೆ




**ಮಾಸ್ಟರ್। ವೇದಾಂತ್ ಕಲಮೆ,** ಮೂಡಿಗೆರೆ



**ಮಾಸ್ಟರ್। ಧನ್ವಿನ್ ಎಂ ಎಂ,** ನಿಡ್ಲೆ



**ಶ್ರೀಮತಿ ಕವಿತಾ ಎಂ ಪಿ,**
ಬೆಂಗಳೂರು



**ಶ್ರೀ ಸಮರ್ಥ್ ಆರ್**
ಮುಗುಳಿ

## ನಿಮಗಿದು ತಿಳಿದಿರಲಿ

### ಸ್ಪೈನಾ ಬೈಫಿಡಾದ ಪ್ರಕಾರಗಳು (Types of Spina Bifida):

- **Spina Bifida Occulta (ಮೂಳೆಯೊಳಗಿನ ಸಣ್ಣ ತೊಂದರೆ):**

ಅತ್ಯಂತ ಸಾಮಾನ್ಯ ಮತ್ತು ಅಲ್ಪ ತೀವ್ರತೆಯ ರೂಪ. ಚರ್ಮದ ಮೇಲಿನ ಲಕ್ಷಣಗಳು ಮಾತ್ರ ಕಾಣಬಹುದು (ಉದಾ: ಕೂದಲು, ಚಿಕ್ಕ ಗುಬ್ಬಚ್ಚೆ ಅಥವಾ ಗುರುತು).

- **Meningocele (ಮೆನಿಂಜಿಸ್ ಹೊರಬರುವಿಕೆ):**

ಬೆನ್ನುಹುರಿಯ ಸುತ್ತಿನ ರಕ್ಷಣಾ ಪದರವಾದ ಮೆನಿಂಜಿಸ್ (meninges) ಚರ್ಮದ ಹೊರಗೆ ಉಬ್ಬಿಕೊಳ್ಳುತ್ತದೆ. ನರ ವ್ಯವಸ್ಥೆ ಭಾಗವಹಿಸದಿದ್ದರೆ ಕಾರ್ಯಸಾಧ್ಯತೆ ಉಳಿಯಬಹುದು.

- **Myelomeningocele (ಗಂಭೀರ ರೂಪ):**

ಅತ್ಯಂತ ತೀವ್ರವಾದ ರೂಪ. ಬೆನ್ನುಹುರಿ ಮತ್ತು ಮೆನಿಂಜಿಸ್ ಎರಡೂ ಹೊರಗೆ ಕಾಣಿಸುತ್ತವೆ. ಶಿಶುವಿನಲ್ಲಿ ಪಾದ ಚಲನೆ ಕಷ್ಟ, ಮೂತ್ರ-ಮಲ ನಿಯಂತ್ರಣ ಸಮಸ್ಯೆ ಮತ್ತು ಸಂವೇದನೆ ನಷ್ಟ ಉಂಟಾಗಬಹುದು.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಪುನಶ್ಚೇತನಗೊಂಡು ಮರಳಿ ವಿದ್ಯಾರ್ಥಿಗಳಿಗೆ ಜ್ಞಾನದೀವಿಗೆಯಾದ ಉಪನ್ಯಾಸಕ ಶ್ರೀ ಸದಾಶಿವ ಅರಸೀಕೆರೆ



ಸದಾಶಿವ ಇವರು ಮೂಲತಃ ಅರಸೀಕೆರೆ ತಾಲೂಕಿನ ನಿವಾಸಿಯಾಗಿದ್ದು, 4 ಜೂನ್ 1973 ರಲ್ಲಿ ಶ್ರೀ ಕಾಡಯ್ಯ ಮತ್ತು ಶ್ರೀಮತಿ ವೇದಾವತಿ ದಂಪತಿಯ ಪುತ್ರರಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕಲ್ಯಾಡಿ ಜಿಪಿಎಸ್ ಶಾಲೆಯಲ್ಲಿ, PUC ಶಿಕ್ಷಣವನ್ನು ಅರಸೀಕೆರೆಯ GPUC ಯಲ್ಲಿ ಪೂರ್ಣಗೊಳಿಸಿದರು. ಪದವಿ ಶಿಕ್ಷಣವನ್ನು ಅಲ್ಲಮ್ಮಿ ನಝಿ ದಾದ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಹಾಗೂ MA ಶಿಕ್ಷಣವನ್ನು ಮೈಸೂರು ಯೂನಿವರ್ಸಿಟಿಯಲ್ಲಿ ಪಡೆದುಕೊಂಡರು. ಕಲಿಕೆಯ ನಂತರ ಪದವಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. 2006 ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟ ನಂತರ ಮುದ್ದಾದ ಗಂಡು ಮಗುವಿಗೂ ಜನ್ಮ ನೀಡಿದರು. ಸುಂದರವಾಗಿ ಜೀವನವನ್ನು ನಡೆಸುತ್ತ ತನ್ನ ವೃತ್ತಿಯನ್ನು ಮಾಡುತ್ತ ಜೀವನವನ್ನು ಸಾಗಿಸುತ್ತಿದ್ದ ಸದಾಶಿವ ರವರ ಜೀವನದಲ್ಲಿ ಎಂದು ಮರೆಯಲಾಗದ ಕಹಿ ಘಟನೆ ನಡೆದುಹೋಯಿತು. ಎಂದಿನಂತೆ ಕೆಲಸವನ್ನು ಮುಗಿಸಿ ವಾಪಸಾಗುವ ವೇಳೆಯಲ್ಲಿ 8 ಡಿಸೆಂಬರ್ 2022 ರಂದು ಬೈಕ್ ಅಪಘಾತವಾಗಿ ಆಸ್ಪತ್ರೆಗೆ ದಾಖಲಾದರು ಅವರ ಜೀವನದಲ್ಲಿಯೇ ಮರೆಯಲಾಗದ ಘಟನೆ ನಡೆದುಹೋಯಿತು.

ಈ ಆಕ್ಸಿಡೆಂಟ್ ಅವರ ಜೀವನದ ದಿಕ್ಕನ್ನೇ ಬದಲಾಯಿಸಿ ಬಿಟ್ಟಿತು. ತಕ್ಷಣ ಅವರನ್ನು ಅರಸೀಕೆರೆಯ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಮುಂದಿನ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಬಂದರು. ಆದರೆ ವಿಧಿಯ ಆಟ ಬೇರೇನೇ ಇತ್ತು, ಈ ಅಪಘಾತದಿಂದಾಗಿ ಬೆನ್ನುಹುರಿ ಅಪಘಾತವಾಗಿ ನಡೆದಾಡಲು ಸಾಧ್ಯವಿಲ್ಲವೆನ್ನುವ ಪರಿಸ್ಥಿತಿಗೆ ಎದುರಾದರು. ಬೆನ್ನುಹುರಿ ಅಪಘಾತ ಎಂದರೆ ಏನು ? ಅದು ಯಾವ ರೀತಿ ಪರಿಣಾಮ ಬೀಳುತ್ತದೆ ಎಂಬ ವಿಷಯವೂ ತಿಳಿಯದ ಸದಾಶಿವ ರವರಿಗೆ ಆಸ್ಪತ್ರೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ವಿಷಯವನ್ನು ತಿಳಿಸಲಾಯಿತು ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಲಾಯಿತು. ಆಸ್ಪತ್ರೆಯಲ್ಲಿಯೇ ಇದ್ದು ಚಿಕಿತ್ಸೆಯನ್ನು ಪಡೆದುಕೊಂಡರು.

ಚಿಕಿತ್ಸೆಯನ್ನು ಪಡೆದ ನಂತರ 13 ತಿಂಗಳುಗಳ ಕಾಲ ಮಲಗಿದಲ್ಲೇ ತನ್ನ ಜೀವನವನ್ನು ಹಾಸಿಗೆಯಲ್ಲೇ ಕಳೆದರು. ನಂತರ ಇನ್ನೊಮ್ಮೆ ಶಿವಮೊಗ್ಗದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಿದರು ಬಳಿಕ ಸ್ವಲ್ಪ ಚೇತರಿಸಿಕೊಂಡರು. ಆದರೆ ಮಲಗಿದಲ್ಲೇ ಇದ್ದು ಒತ್ತಡ ಗಾಯಕ್ಕೆ ಒಳಗಾದರು. ಈ ದುರ್ಘಟನೆ ಅವರ ಮನಸನ್ನೇ ಆವರಿಸಿಬಿಟ್ಟಿತ್ತು. ಈ ಸಂದರ್ಭದಲ್ಲಿ ಕುಟುಂಬದವರು, ಸ್ನೇಹಿತರು ಬೆನ್ನೆಲುಬಾಗಿ ನಿಂತು ಪ್ರತಿ ಹಂತದಲ್ಲೂ ದೈರ್ಯ ತುಂಬಿ ಮುನ್ನಡೆಸಿದರು. ಇನ್ನು ನನ್ನಿಂದ ಏನೂ ಮಾಡಲು ಸಾಧ್ಯವಾಗದು ನನ್ನ ಜೀವನ ಇಲ್ಲಿಗೆ ಮುಗಿದು ಹೋಯಿತು ಎಂದು ಆಸೆಯನ್ನೇ ಬಿಟ್ಟಿದ್ದ ಸದಾಶಿವ ಅವರಿಗೆ ಪರಿಚಯವಾದದ್ದು "ಸೇವಾಧಾಮ."

ಸೇವಾಧಾಮದ ಫಿಸಿಯೋಥೆರಪಿಸ್ಟ್ ಶ್ರೀ ಮಧುರವರ ಮುಖಾಂತರ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರ ಪರಿಚಯ ಮಾಡಿಕೊಂಡು ಸೇವಾಧಾಮಕ್ಕೆ ಭೇಟಿ ನೀಡಿದರು ನಂತರ ಪುನಶ್ಚೇತನವನ್ನು ಪಡೆದುಕೊಂಡು ವೀಲ್ ಚೇರ್ ನಿಂದ ಹೇಗೆ ಶಿಫ್ಟ್ ಆಗೋದು ಎಂಬುದರ ಬಗ್ಗೆ ತಿಳಿದುಕೊಂಡು 45 ದಿನಗಳ ಕಾಲ ಪುನಶ್ಚೇತನವನ್ನು ಪಡೆದುಕೊಂಡು ಸ್ವಲ್ಪ ಚೇತರಿಸಿಕೊಳ್ಳುತ್ತ ಬಂದರು. ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡ ನಂತರ ಅರಸೀಕೆರೆ ಪ್ರತಿಭ ಪಿಯುಸಿ ಕಾಲೇಜಿನಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತ ಮುನ್ನಡೆಸಿಕೊಂಡು ಸ್ವಾವಲಂಬಿ ಜೀವನ ಸಾಗಿಸಿ ಎಲ್ಲರಿಗೂ ಸ್ಪೂರ್ತಿಯಾಗುವಂತೆ ಬದುಕು ರೂಪಿಸಿಕೊಂಡಿದ್ದಾರೆ.

**ಶ್ರೀಯುತರನ್ನು ಹಾರೈಸಲು: Mob NO- 96636 25297**